**ಅಸಲು ದಾವಾ ಸಂಖ್ಯೆ - 97/2017**

**ವಾದಿ ಸಾಕ್ಷಿ - 1**

**ದಿನಾಂಕ 27-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಪಾಟೀ ಸವಾಲುಃ ವಾದಿಗಳ ಪರ ವಕೀಲರಾದ ಶ್ರೀ ಪಿ. ಪಿ. ಕುಲಕರ್ಣಿಯವರಿಂದ.**

1 ನೇ ಪ್ರತಿವಾದಿಯಾದ ಶಾಂತಪ್ಪನ ತಂದೆ ಹೆಸರು ಬಸಪ್ಪ. ಸದರಿ ಬಸಪ್ಪ ಹೆಂಡತಿ ಹೆಸರು ಈರಮ್ಮ. ಬಸಪ್ಪನ ತಂದೆ ಹೆಸರು ಅಯ್ಯಪ್ಪ. ಅಯ್ಯಪ್ಪನ ಹೆಂಡತಿ ಹೆಸರು ಗೊತ್ತಿಲ್ಲ. ಅಯ್ಯಪ್ಪನ ತಂದೆ ಹೆಸರು ಚನ್ನಮಲ್ಲಪ್ಪ. ಅಯ್ಯಪ್ಪನ ತಂದೆ ಹೆಸರು ಕಲ್ಲಪ್ಪ ಎಂದರೆ ಸರಿಯಲ್ಲ. ಅಯ್ಯಪ್ಪನ ತಂದೆ ಹೆಸರು ಚನ್ನಮಲ್ಲಪ್ಪ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಯ್ಯಪ್ಪನಿಗೆ ಬಸಪ್ಪ, ಸಾಯಬಣ್ಣ ಮತ್ತು ಹಣಮಂತರಾಯ ಎನ್ನುವ 3 ಜನ ಮಕ್ಕಳು ಎಂದರೆ ಸರಿಯಲ್ಲ. ಸದರಿ ಅಯ್ಯಪ್ಪನಿಗೆ ಬಸಪ್ಪ ಮತ್ತು ಸಾಯಬಣ್ಣ ಮಾತ್ರ ಮಕ್ಕಳು ಎಂದು ಹೇಳುತ್ತಾರೆ. ಸಾಯಬಣ್ಣನ ಹೆಂಡತಿ ಹೆಸರು ಗುರುಲಿಂಗಮ್ಮ. ಅಯ್ಯಪ್ಪನಿಗೆ ಹಣಮಂತಾಯ ಸಹ ಮಗ ಎಂದರೆ ಸರಿಯಲ್ಲ. ಸದರಿ ಹಣಮಂತರಾಯ ಮರಣ ಹೊಂದಿದ್ದು ಆತನಿಗೆ ಲಕ್ಷ್ಮೀಬಾಯಿ ಎನ್ನುವ ಹೆಂಡತಿಯಿದ್ದಾಳೆ ಎಂದರೆ ಸಾಕ್ಷಿ ಅವರು ಅಯ್ಯಪ್ಪನ ಸಂಬಂಧಿಕರಲ್ಲ ಎಂದು ಹೇಳುತ್ತಾರೆ. ಸಾಯಬಣ್ಣ ಮತ್ತು ಗುರುಲಿಂಗಮ್ಮಳಿಗೆ ಕಸ್ತೂರಿ ಎನ್ನುವ ಮಗಳು ಇದ್ದಾಳೆ ಎಂದರೆ ಸರಿ. 1 ನೇ ಪ್ರತಿವಾದಿ ತಂದೆಯಾದ ಬಸಪ್ಪನಿಗೆ 1 ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. 1 ನೇ ಪ್ರತಿವಾದಿ ಹೆಂಡತಿ ಹೆಸರು ರುದ್ರಮ್ಮ ಎಂದರೆ ಸರಿ. 1 ಮತ್ತು 2 ನೇ ವಾದಿಗಳು ಹಾಗೂ 2 ಮತ್ತು 3 ನೇ ಪ್ರತಿವಾದಿಗಳು 1 ನೇ ಪ್ರತಿವಾದಿ ಮತ್ತು ರುದ್ರಮ್ಮಳ ಮಕ್ಕಳು ಎಂದರೆ ಸರಿ.

ಬಿಳವಾರ ಗ್ರಾಮದಲ್ಲಿ ಅಯ್ಯಪ್ಪ ಎನ್ನುವ ಹೆಸರಿನ ಹಲವಾರು ಜನ ಇದ್ದಾರೆ ಎಂದರೆ ಸರಿ. ನನ್ನ ತಂದೆ ಹೆಸರು ಅಯ್ಯಪ್ಪ. ನನ್ನ ತಾತನ ಹೆಸರು ದಂಡಪ್ಪ. ದಂಡಪ್ಪನ ತಂದೆ ಹೆಸರು ಚನ್ನಮಲ್ಲಪ್ಪ. ವಾದಿಯರು ಮತ್ತು ಪ್ರತಿವಾದಿಗಳ ಮನೆತನ ಬೇರೆ ಹಾಗೂ ನಮ್ಮ ಮನೆತನ ಬೇರೆ ಎಂದರೆ ಸರಿ. 1 ನೇ ಪ್ರತಿವಾದಿ ಎಲ್ಲಿಯವರೆಗೆ ವಿದ್ಯಾಭ್ಯಾಸ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ.

2015 ನೇ ಸಾಲಿನಲ್ಲಿ ದಾವಾ ಜಮೀನನ್ನ ನಾನು ನನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ವಂಶಾವಳಿಯ ಮಾಹಿತಿಯನ್ನ ಊರಿನ ಹಿರಿಯರು ನೀಡಿರುತ್ತಾರೆ. ವಂಶಾವಳಿಗೆ ಸಹಿ ಮಾಡಿರುವ ಹಣಮಂತ ತಂದೆ ಭೀಮಶಾ ಎನ್ನುವವನಿಗೆ 60 ವರ್ಷ ವಯಸ್ಸಾಗಿರುತ್ತದೆ. ಅದೇ ರೀತಿ ಪರುಶುರಾಮ ತಂದೆ ಹಣಮಂತನಿಗೆ 45 ವರ್ಷ ವಯಸ್ಸಾಗಿರುತ್ತದೆ. ಅದೇ ರೀತಿ ಮಲ್ಲಿಕಾರ್ಜುನ ತಂದೆ ಕಲ್ಲಪ್ಪನಿಗೆ 65-70 ವರ್ಷ ವಯಸ್ಸಾಗಿದ್ದು ಆತ ಈಗ್ಗೆ ಒಂದು ವರ್ಷದ ಹಿಂದೆ ಮರಣ ಹೊಂದಿರುತ್ತಾನೆ. ವಂಶಾವಳಿಯನ್ನ ತಪ್ಪು ಮಾಹಿತಿ ನೀಡಿ ಬರೆಸಲಾಗಿದೆ ಎಂದರೆ ಸರಿ.

**ಅಸಲು ದಾವಾ ಸಂಖ್ಯೆ- 97/2017**

**ವಾದಿ ಸಾಕ್ಷಿ - 1**

1 ನೇ ಪ್ರತಿವಾದಿ ಬರೆದುಕೊಟ್ಟಿದ್ದಾನೆ ಎಂದು ಹೇಳುವ ಹಕ್ಕು ಬಿಡುಗಡೆ ಪತ್ರವನ್ನ ನೊಂದಣಿ ಮಾಡಿಸಿರುವುದಿಲ್ಲ. ಅದನ್ನ 4 ವರ್ಷಗಳ ಹಿಂದೆ ಬರೆಸಿಕೊಂಡಿರುತ್ತೇನೆ. ಸದರಿ ಪತ್ರಕ್ಕೆ 1 ನೇ ಪ್ರತಿವಾದಿ ಮಕ್ಕಳು ಸಹಿ ಮಾಡಿರುವುದಿಲ್ಲ. ದಿನಾಂಕ 09-05-1998 ರಂದು ದಾವಾ ಜಮೀನನ್ನ ನಾನು ಖರೀದಿ ಹಿಡಿದಿರುತ್ತೇನೆ. ದಾವಾ ಜಮೀನಿಗೆ ಸಂಬಂಧಿಸಿದಂತೆ ಕ್ರಯ ಪತ್ರವನ್ನ ಬರೆದುಕೊಡುವಂತೆ 1998 ನೇ ಸಾಲಿನಿಂದ ಇಲ್ಲಿಯವರೆಗೆ ನಾನು 1 ನೇ ಪ್ರತಿವಾದಿಗೆ ವಕೀಲರ ಮುಖಾಂತರ ನೋಟಿಸ ನೀಡಿರುವುದಿಲ್ಲ. ಹಕ್ಕು ಬಿಡಗಡೆ ಪತ್ರದಲ್ಲಿ ಖರೀದಿ ಕರಾರು ಪತ್ರದ ಬಗ್ಗೆ ನಮೂದು ಇರುವುದಿಲ್ಲ. ಖೊಟ್ಟಿ ವಂಶಾವಳಿಯನ್ನ ತಯಾರಿಸಿ ದಾವಾ ಜಮೀನು ನನ್ನ ಪಾಲಿಗೆ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಜಮೀನು ವಾದಿಯರ ಪಿತ್ರಾರ್ಜಿತ ಆಸ್ತಿ ಇದ್ದು ಅದರ ಮೇಲೆ ಅವರಿಗೆ ಹಕ್ಕಿದೆ ಎಂದರೆ ಸರಿ. 1 ನೇ ವಾದಿಯ ವಿವಾಹ ಯಾವಾಗ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಅದೇ ರೀತಿ 2 ನೇ ವಾದಿಯ ವಿವಾಹ ಯಾವಾಗ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಅದೇ ರೀತಿ 2 ಮತ್ತು 3 ನೇ ಪ್ರತಿವಾದಿಗಳ ವಿವಾಹ ಯಾವಾಗ ಆಗಿದೆ ಎನ್ನುವುದು ನನಗೆ ಗೊತ್ತಿಲ್ಲ. ವಾದಿಯರು ಮತ್ತು 2 ಹಾಗೂ 3 ನೇ ಪ್ರತಿವಾದಿಗಳು ಎಲ್ಲಿ ಓದಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಯಾವಾಗಿನಿಂದ ಶಹಾಬಾದನಲ್ಲಿ ವಾಸ ಮಾಡುತ್ತಿದ್ದಾರೆ ಎನ್ನುವುದನ್ನ ಹೇಳಲಾಗುವುದಿಲ್ಲ. ಸುಮಾರು 20 ವರ್ಷಗಳ ಹಿಂದೆ 1 ನೇ ಪ್ರತಿವಾದಿಯು ಕುಟುಂಬದ ಸಮೇತ ಶಹಾಬಾದನಿಂದ ನೀರಲಗಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾನೆ. 1 ನೇ ಪ್ರತಿವಾದಿಯು ನೀರಲಗಿಯಲ್ಲಿ ವಾಸವಾಗಿದ್ದಾಗ ತನ್ನ ಮಕ್ಕಳ ವಿವಾಹವನ್ನ ಮಾಡಿರುತ್ತಾನೆ. ಕ್ರಯದ ಕರಾರು ಪತ್ರವನನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. 1 ನೇ ಪ್ರತಿವಾದಿಗೆ ಹಣ ನೀಡಿದ ಬಗ್ಗೆ ರಸೀದಿಯನ್ನ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ಯಾವುದೇ ದಾಖಲೆಯನ್ನ ಹಾಜರು ಮಾಡದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮತ್ತು 1 ನೇ ಪ್ರತಿವಾದಿಯ ಮನೆತನಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮನೆತನದ ದಾವಾ ಆಸ್ತಿಯನ್ನ ಎತ್ತಿ ಹಾಕಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಹಿರಿಯ ಶ್ರೇಣಿ ದಿವಾನಿ ನ್ಯಾಯಾಧೀಶರು**

**ಜೇವರ್ಗಿ**